# National
# Kannada
# 26.06.2026 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

೧. ಮಾದಕವಸ್ತು ಪಿಡುಗಿನ ವಿರುದ್ಧದ ಅಭಿಯಾನಕ್ಕೆ ಒಗ್ಗಟ್ಟಾಗಿ ಕೈಜೋಡಿಸುವಂತೆ ನಾಗರಿಕರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಕರೆ

೨. ನಾಳೆಯಿಂದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಕರ್ನಾಟಕ ಪ್ರವಾಸ: ಬೆಂಗಳೂರಿನ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ

೩. ವೆನೆಜುವೆಲಾ ಭೀಕರ ಭೂಕಂಪ; ಮೃತರ ಸಂಖ್ಯೆ ೫೮೯ ಏರಿಕೆ; ಸಂಕಷ್ಟಕ್ಕೆ ಭಾರತ ಸ್ಪಂದನೆ; ಅಗತ್ಯ ಪರಿಹಾರ ಸಾಮಾಗ್ರಿ ರವಾನೆ

೪. ಯುಎಸ್ ಓಪನ್ ಬ್ಯಾಡ್ಮಿಂಟನ್; ಭಾರತದ ಐವರು ಕ್ರೀಡಾಪಟುಗಳು ಕ್ವಾರ್ಟರ್ ಫೈನಲ್ಸ್‌ಗೆ ಪ್ರವೇಶ

೫. ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್: ಏಳು ಚಿನ್ನ ಸೇರಿ, ೨೪ ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಭಾರತಕ್ಕೆ ಅಗ್ರಸ್ಥಾನ

**<><><*><><<>**

ಮಾದಕವಸ್ತುಗಳ ಪಿಡುಗು ರಾಷ್ಟ್ರೀಯ ಭದ್ರತೆ ಮತ್ತು ಯುವ ಪೀಳಿಗೆಯ ಭವಿಷ್ಯಕ್ಕೆ ದೊಡ್ಡ ಭೀತಿಯಾಗಿದ್ದು, ಇದರ ವಿರುದ್ಧದ ಅಭಿಯಾನಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಕರೆ ನೀಡಿದ್ದಾರೆ. ನವದೆಹಲಿಯಲ್ಲಿ ನಡೆದ ನಾರ್ಕೋ-ಕೋಆರ್ಡಿನೇಷನ್ ಸೆಂಟರ್ ಎನ್‌ಕಾರ್ಡ್‌ನ ೧೦ನೇ ಉನ್ನತ ಮಟ್ಟದ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ೨೦೦೪-೨೦೧೪ರ ಅವಧಿಯಲ್ಲಿ ೨೬ ಲಕ್ಷ ಕೆ.ಜಿ ಇದ್ದ ಸಿಂಥೆಟಿಕ್ ಮಾದಕವಸ್ತುಗಳ ಜಪ್ತಿ ಪ್ರಮಾಣವು ೨೦೧೪-೨೦೨೬ರ ಅವಧಿಯಲ್ಲಿ ೧ ಕೋಟಿ ೧೮ ಲಕ್ಷ ಕೆ.ಜಿ.ಗೆ ಏರಿಕೆಯಾಗಿದೆ. ಇದು ಮಾದಕವಸ್ತು ಜಾಲದ ವಿರುದ್ಧ ಸರ್ಕಾರದ ಕಟ್ಟುನಿಟ್ಟಿನ ಕ್ರಮಕ್ಕೆ ಸಾಕ್ಷಿಯಾಗಿದೆ ಎಂದರು. ಇದೇ ಸಂದರ್ಭದಲ್ಲಿ ಅಮಿತ್ ಶಾ ಅವರು, ಮಾದಕವಸ್ತುಗಳ ಬೇಡಿಕೆ ಹಾಗೂ ಪೂರೈಕೆ ಕಡಿತ ಮತ್ತು ಪುನರ್ವಸತಿಗೆ ಒತ್ತು ನೀಡುವ 'ಮಾದಕವಸ್ತು ನಿಯಂತ್ರಣ ದೃಷ್ಟಿಕೋನ ಪತ್ರ ೨೦೨೬-೨೦೨೯' ಅನ್ನು ಬಿಡುಗಡೆ ಮಾಡಿದರು. ಇದರ ಜೊತೆಗೆ, ಸುಮಾರು ಆರು ಸಾವಿರ ಕೋಟಿ ರೂಪಾಯಿ ಮೌಲ್ಯದ ೨ ಲಕ್ಷ ೭ ಸಾವಿರದ ೫೦೦ ಕೆ.ಜಿ.ಗೂ ಅಧಿಕ ಮಾದಕವಸ್ತುಗಳನ್ನು ನಾಶಪಡಿಸುವ 'ಮಾದಕವಸ್ತು ವಿಲೇವಾರಿ ಪಾಕ್ಷಿಕ'ಕ್ಕೂ ಚಾಲನೆ ನೀಡಿದ ಗೃಹ ಸಚಿವರು, ಈ ಕ್ರಮವು ಮಾದಕವಸ್ತು ಜಾಲಗಳಿಗೆ ದೃಢ ಸಂದೇಶ ರವಾನಿಸಲಿದೆ ಎಂದರು.

**<><><*><><<>**

ನಶೆಮುಕ್ತ ಭಾರತ ಅಭಿಯಾನ ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಒಂದು ಸಾಮೂಹಿಕ ಚಳವಳಿಯಾಗಿ ಹೊರಹೊಮ್ಮಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಬಿ.ಎಸ್.ವರ್ಮಾ ಅವರ ಲೇಖನವೊಂದನ್ನು ಹಂಚಿಕೊಂಡಿರುವ ಪ್ರಧಾನಿ, ಮಾದಕವಸ್ತು ಮುಕ್ತಭಾರತ ಮತ್ತು ವಿಕಸಿತ ಭಾರತವನ್ನು ನಿರ್ಮಿಸುವ ಈ ಆಂದೋಲನದಲ್ಲಿ ಪ್ರತಿಯೊಬ್ಬ ನಾಗರಿಕರನು ಕೈಜೋಡಿಸಬೇಕು ಎಂದು ಕರೆ ನೀಡಿದ್ದಾರೆ.

<>><><*><><<>

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ನಾಳೆಯಿಂದ ಎರಡು ದಿನಗಳ ಕಾಲ ಕರ್ನಾಟಕ ಪ್ರವಾಸ ಕೈಗೊಳ್ಳಲಿದ್ದಾರೆ. ತಮ್ಮ ಈ ಪ್ರವಾಸದ ಅಂಗವಾಗಿ ಉಪರಾಷ್ಟ್ರಪತಿಯವರು ನಾಳೆ ಬೆಂಗಳೂರಿನಲ್ಲಿ ಆಯೋಜಿಸಲಾಗಿರುವ ನಾಡಪ್ರಭು ಕೆಂಪೇಗೌಡರ ೫೧೭ನೇ ಜಯಂತ್ಯುತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ನಾಡಿದ್ದು, ಬೆಂಗಳೂರಿನಲ್ಲಿ ನಡೆಯಲಿರುವ ನಶಾ ಮುಕ್ತ ಭಾರತ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಭಾಗವಹಿಸಲಿದ್ದಾರೆ. ಈ ಸಮಾವೇಶವನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನಾಚರಣೆ ಹಾಗೂ ಅಂತಾರಾಷ್ಟ್ರೀಯ ಮಾದಕವಸ್ತು ವಿರೋಧಿ ಮತ್ತು ಅಕ್ರಮ ಸಾಗಣೆ ತಡೆ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಳ್ಳಲಾಗಿದೆ.

<>><><*><><<>

ವೆನೆಜುವೆಲಾದಲ್ಲಿ ಸಂಭವಿಸಿದ ಎರಡು ಪ್ರಬಲ ಭೂಕಂಪಗಳಲ್ಲಿ ಮೃತಪಟ್ಟವರ ಸಂಖ್ಯೆ ೫೮ಕ್ಕೆ ಏರಿಕೆಯಾಗಿದ್ದು, ಸುಮಾರು ಮೂರು ಸಾವಿರಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ರಾಜಧಾನಿ ಕ್ಯಾರಕಾಸ್ ಮತ್ತು ಹತ್ತಿರದ ಕರಾವಳಿ ನಗರವಾದ ಲಾ ಗ್ವೈರಾದಲ್ಲಿ ಕುಸಿದು ಬಿದ್ದಿರುವ ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಸಿಲುಕಿರುವ ಜನರನ್ನು ರಕ್ಷಿಸಲು ರಕ್ಷಣಾ ಸಿಬ್ಬಂದಿ ತೀವ್ರ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಮೊದಲು ರಿಕ್ಟರ್ ಮಾಪಕದಲ್ಲಿ ೭.೨ ತೀವ್ರತೆಯ ಭೂಕಂಪ ಸಂಭವಿಸಿದ್ದು, ಅದರ ಬೆನ್ನಲ್ಲೇ ಸೆಕೆಂಡುಗಳ ಅಂತರದಲ್ಲಿ ಮತ್ತಷ್ಟು ಪ್ರಬಲವಾದ ೭.೫ ತೀವ್ರತೆಯ ಭೂಕಂಪ ಸಂಭವಿಸಿದೆ. ಇವೆರಡೂ ಭೂಕಂಪನಗಳು ಭೂಮಿಯ ಮೇಲ್ಮೈಗೆ ಹತ್ತಿರದಲ್ಲೇ ಸಂಭವಿಸಿರುವುದರಿಂದ ವಿನಾಶದ ತೀವ್ರತೆ ಹೆಚ್ಚಾಗಿದೆ. ಪರಿಸ್ಥಿತಿಯನ್ನು ಎದುರಿಸಲು ದೇಶದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ಅವರು ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ. ವಿಶ್ವದ ಹಲವು ದೇಶಗಳು ವೆನೆಜುವೆಲಾದ ರಕ್ಷಣಾ ಕಾರ್ಯಕ್ಕೆ ನೆರವು ನೀಡುವುದಾಗಿ ಘೋಷಿಸಿವೆ. ಭಾರತ ಸರ್ಕಾರ ಕೂಡ, ಆಪರೇಷನ್ ಅಮಿಸ್ಟಾಡ್ ಮೂಲಕ ನೆರವು ನೀಡಲು ಮುಂದಾಗಿದೆ. ಈ ಕಾರ್ಯಾಚರಣೆಯಡಿಯಲ್ಲಿ, ಭಾರತೀಯ ವಾಯುಸೇನೆಯ ಎರಡು ಎಂಸಿಸಿ, ಸಿ-೧೭ ವಿಮಾನಗಳು ಅಗತ್ಯ ಪರಿಹಾರ ಸಾಮಗ್ರಿಗಳೊಂದಿಗೆ ಇಂದು ವೆನೆಜುವೆಲಾಕ್ಕೆ ಪ್ರಯಾಣ ಬೆಳೆಸಿವೆ. ಈ ತುರ್ತು ನೆರವು ಕಾರ್ಯಾಚರಣೆಯು ಭಾರತೀಯ ಸೇನೆಯ ತಾತ್ಕಾಲಿಕ ಆಸ್ಪತ್ರೆ ಘಟಕ ಮತ್ತು ಎರಡು ಭೀಷ್ಮ ಕ್ಯೂಬ್ಸ್ ಒಳಗೊಂಡಂತೆ ೩೫ ಟನ್‌ಗೂ ಹೆಚ್ಚು ಪರಿಹಾರ ಸಾಮಗ್ರಿಗಳು, ಔಷಧಗಳು ಹಾಗೂ ವೈದ್ಯಕೀಯ ಉಪಕರಣಗಳನ್ನು ಒಳಗೊಂಡಿದೆ. ಕಷ್ಟದ ಸಮಯದಲ್ಲಿ ಭಾರತವು ತೋರಿರುವ ಸಹಾಯಹಸ್ತಕ್ಕೆ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ಕೃತಜ್ಞತೆ ಸಲ್ಲಿಸಿದ್ದಾರೆ. ದುರಂತದ ಬಗ್ಗೆ ಸಂತಾಪ ಸೂಚಿಸಿ, ಪರಿಹಾರ ಕಾರ್ಯಗಳಿಗೆ ಅಗತ್ಯವಿರುವ ಎಲ್ಲಾ ಬೆಂಬಲವನ್ನು ನೀಡಲು ಭಾರತ ಸಿದ್ಧವಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದ ಸಂದೇಶವನ್ನು ಉಲ್ಲೇಖಿಸಿರುವ ಅಧ್ಯಕ್ಷರು,

ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯಕ್ತವಾಗುತ್ತಿರುವ ಬೆಂಬಲವನ್ನು ಶ್ಲಾಘಿಸಿದ್ದಾರೆ ಹಾಗೂ ಭಾರತದ ಈ ಸಹೋದರತ್ವದ ಮನೋಭಾವಕ್ಕೆ ವೆನೆಜುವೆಲಾ ಪರವಾಗಿ ಧನ್ಯವಾದ ಅರ್ಪಿಸಿದ್ದಾರೆ.

<>><><*><><<>

ಭಾರತ ಮತ್ತು ಜಪಾನ್ ನಡುವಿನ ೧೬ನೇ ವಾರ್ಷಿಕ ಶೃಂಗಸಭೆಯಲ್ಲಿ ಭಾಗವಹಿಸಲು ಜಪಾನ್ ಪ್ರಧಾನಮಂತ್ರಿ ಸನಾಯೆ ತಕೈಚಿ ಅವರು ಜುಲೈ ೧ರಿಂದ ೩ರವರೆಗೆ ನವದೆಹಲಿಗೆ ಅಧಿಕೃತ ಭೇಟಿ ನೀಡಲಿದ್ದಾರೆ. ಈ ಶೃಂಗಸಭೆಯು ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಹಕಾರವನ್ನು ಬಲಪಡಿಸಲು ಹಾಗೂ ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ಉತ್ತಮ ಅವಕಾಶವನ್ನು ಕಲ್ಪಿಸಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

<>><><*><><<>

ಸಾರ್ವಜನಿಕ ಆರೋಗ್ಯ ಮತ್ತು ಗ್ರಾಹಕರ ಸುರಕ್ಷತೆಯನ್ನು ಕಾಯ್ದುಕೊಳ್ಳುವ ಜೊತೆಯಲ್ಲೇ, ಉದ್ಯಮ ಸ್ನೇಹಿ ವಾತಾವರಣವನ್ನು ಉತ್ತೇಜಿಸಲು ಕೇಂದ್ರ ಸರ್ಕಾರವು ಆರೋಗ್ಯ ಕ್ಷೇತ್ರದಲ್ಲಿ 'ಜನ ವಿಶ್ವಾಸ ಕಾಯ್ದೆ' ಸುಧಾರಣೆಗಳನ್ನು ಜಾರಿಗೆ ತಂದಿದೆ. ಇದರ ಅಡಿಯಲ್ಲಿ ಔಷಧಗಳು ಮತ್ತು ಸೌಂದರ್ಯವರ್ಧಕಗಳ ಕಾಯ್ದೆ ೧೯೪೦ ಹಾಗೂ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ೨೦೦೬ರ ಅನ್ವಯ ಬರುವ ಸಣ್ಣಪುಟ್ಟ ಅಪರಾಧಗಳನ್ನು ತರ್ಕಬದ್ಧಗೊಳಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಈ ಸುಧಾರಣೆಗಳ ಭಾಗವಾಗಿ, ಜಾಹೀರಾತುಗಳಿಗಾಗಿ ಸರ್ಕಾರಿ ವಿಶ್ಲೇಷಕರ ವರದಿ ಬಳಸುವುದಕ್ಕೆ ವಿಧಿಸಲಾಗುತ್ತಿದ್ದ ದಂಡದ ನಿಬಂಧನೆಯನ್ನು ಕೈಬಿಡಲಾಗಿದೆ.

<>><><*><><<>

ಕೃತಕ ಬುದ್ಧಿಮತ್ತೆ, ಪರಮಾಣು, ಬಾಹ್ಯಾಕಾಶ ಮತ್ತು ಕ್ವಾಂಟಮ್ ತಂತ್ರಜ್ಞಾನಗಳು ಭವಿಷ್ಯದ ಪ್ರಗತಿ ಹಾಗೂ ಜಾಗತಿಕ ಸ್ಪರ್ಧಾತ್ಮಕತೆಯನ್ನು ನಿರ್ಧರಿಸಲಿವೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ನಡೆದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ಮುಂಚೂಣಿ ತಂತ್ರಜ್ಞಾನಗಳಲ್ಲಿ ಭಾರತವು ಪ್ರಮುಖ ಶಕ್ತಿಯಾಗಿ ಹೊರಹೊಮ್ಮುತ್ತಿದೆ ಎಂದರು.

<>><><*><><<>

ಲಂಡನ್‌ನಲ್ಲಿ ನಡೆದ ವಾರ್ಷಿಕ ಯುಕೆ-ಭಾರತ ಪ್ರಶಸ್ತಿಗಳು-೨೦೨೬ರ ಕಾರ್ಯಕ್ರಮದಲ್ಲಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರಿಗೆ 'ಯುಕೆ-ಭಾರತ ಬಾಂಧವ್ಯವನ್ನು ಉನ್ನತೀಕರಿಸುವಲ್ಲಿ ತೋರಿದ ಅಸಾಧಾರಣ ನಾಯಕತ್ವಕ್ಕಾಗಿ ವಿಶೇಷ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

<>><><*><><<>

ಕ್ಯಾಲಿಫೋರ್ನಿಯಾದ ಫುಲ್ಲರ್‌ಟನ್‌ನಲ್ಲಿ ನಡೆಯುತ್ತಿರುವ ಯುಎಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಐದು ಕ್ರೀಡಾಪಟುಗಳು ಕ್ವಾರ್ಟರ್ ಫೈನಲ್ಸ್ ಪ್ರವೇಶಿಸಿದ್ದಾರೆ. ಪ್ರಮುಖವಾಗಿ ಭಾರತದ ರೌನಕ್ ಚೌಹಾಣ್ ವಿಶ್ವದ ಆರನೇ ಶ್ರೇಯಾಂಕಿತ ಮತ್ತು ಪುರುಷರ ಸಿಂಗಲ್ಸ್ ಅಗ್ರ ಶ್ರೇಯಾಂಕಿತ ಆಟಗಾರ ಚೀನಾ ತೈಪೆಯಾ ಚೌಟಿಯಾನ್ ಚೆನ್ ವಿರುದ್ಧ ೨೧-೧೭, ೨೬-೨೪ ನೇರ ಸೆಟ್‌ಗಳ ಅಂತರದಲ್ಲಿ ಗೆಲುವು ಸಾಧಿಸಿ, ಕ್ವಾರ್ಟನ್ ಫೈನಲ್ ಪ್ರವೇಶಿಸಿದ್ದಾರೆ. ಆ ಮೂಲಕ ಟೂರ್ನಿಯ ಅತಿದೊಡ್ಡ ಅಚ್ಚರಿ ಮೂಡಿಸಿದ್ದಾರೆ. ಇನ್ನು ಪುರುಷರ ಸಿಂಗಲ್ಸ್ ವಿಭಾಗದಲ್ಲೀ ಭಾರತದ ಕಿಡಂಬಿ ಶ್ರೀಕಾಂತ್, ಮಲೇಷಿಯಾದ ಲೀ ಝಿ ಜಿಯಾ ವಿರುದ್ಧ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಗೆಲುವು ದಾಖಲಿಸಿದರು.ಮಹಿಳಾ ಸಿಂಗಲ್ಸ್‌ನಲ್ಲಿ ತಾನ್ವಿ ಶರ್ಮಾ, ರಕ್ಷಿತಾ ಸ್ರೀ ಮತ್ತು ದೇವಿಕಾ ಸಿಹಾಗ್ ಅಂತಿಮ ೮ ಘಟ್ಟ ಪ್ರವೇಶಿಸಿದರು.

<>><><*><><<>

ಜರ್ಮನಿಯಲ್ಲಿ ನಡೆದ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತೀಯ ಶೂಟರ್‌ಗಳು ೭ ಚಿನ್ನ, ೮ ಬೆಳ್ಳಿ ಮತ್ತು ೯ ಕಂಚು ಸೇರಿದಂತೆ ಒಟ್ಟು ೨೪ ಪದಕಗಳನ್ನು ಜಯಿಸಿ ಪದಕ ಪಟ್ಟಿಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.  ಭಾರತದ ಪರವಾಗಿ ಮಹಿಳೆಯರ ೧೦ ಮೀಟರ್ ಏರ್ ಪಿಸ್ತೂಲ್‌ನಲ್ಲಿ ಸೆಜಲ್ ಕಾಂಬ್ಳೆ, ಪುರುಷರ ೨೫ ಮೀಟರ್ ರಾಪಿಡ್ ಫೈರ್ ಪಿಸ್ತೂಲ್‌ನಲ್ಲಿ ಸಮೀರ್, ಪುರುಷರ ೫೦ ಮೀಟರ್ ರೈಫಲ್ ೩-ಪೊಸಿಷನ್ಸ್ ವಿಭಾಗದಲ್ಲಿ ರೋಹಿತ್ ಕನ್ಯಾನ್ ಮತ್ತು ಪುರುಷರ ೧೦ ಮೀದಕ್ ಏರ್ ರೈಫಲ್‌ನಲ್ಲಿ ಪ್ರೀತಮ್ ಕೆಂದ್ರೆ  ವೈಯಕ್ತಿಕ ವಿಭಾಗಗಳಲ್ಲಿ ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ.  ಇದರ ಜೊತೆಗೆ ಸೆಜಲ್, ವಂಶಿಕಾ ಮತ್ತು ನವ್ಯಾ ಬಿಷ್ಣೋಯ್ ಅವರನ್ನೊಳಗೊಂಡ ಮಹಿಳಾ ತಂಡವು ತಂಡ ವಿಭಾಗದಲ್ಲಿ ಸ್ವರ್ಣ ಪದಕ ತಂದುಕೊಟ್ಟಿದೆ.  ಇನ್ನು ಪ್ರಾಚಿ ಗಾಯಕ್ವಾಡ್ ಹಾಗೂ ಶಿವ ನರ್ವಾಲ್ ವೈಯಕ್ತಿಕ ವಿಭಾಗಗಳಲ್ಲಿ ಬೆಳ್ಳಿ ಪದಕಗಳನ್ನು ಗೆದ್ದರೆ, ಹಿಮಾಂಶಿ, ಅನ್ವಿ ರಾಥೋಡ್ ಮತ್ತು ಯುಗ್ ಪ್ರತಾಪ್ ಸಿಂಗ್ ರಾಥೋಡ್ ಕಂಚಿನ ಪದಕಗಳನ್ನು ದೇಶಕ್ಕೆ ತಂದುಕೊಟ್ಟಿದ್ದಾರೆ. ವಿವಿಧ ಪುರುಷರ, ಮಹಿಳಾ ಮತ್ತು ಮಿಶ್ರ ತಂಡ ವಿಭಾಗಗಳಲ್ಲೂ ಭಾರತ ತಂಡವು ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಜಯಿಸಿ ತನ್ನ ಅಭಿಯಾನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>